**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>Spl.C.NDPS.8/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸಲಿಂಗಪ್ಪ ಚಿಮ್ಮಲಗಿ |
| ತಂದೆಯ/ಗಂಡನ ಹೆಸರು | : | ನಂದೆಪ್ಪ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು, KSBCL ಡಿಪೋ, ಬಾಗಲಕೋಟ |
| ವಾಸ ಸ್ಥಳ | : | ಬಾಗಲಕೋಟ |

ಪಿ.ಡಬ್ಲ್ಯೂ 6

ಸಿ.ಡಬ್ಲ್ಯೂ 8

ದಿ: 29-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

1. ಫೆಬ್ರವರಿ 2022 ರಿಂದ ಸೆಪ್ಟೆಂಬರ್ 2025 ರವರೆಗೆ ನಾನು ಅಬಕಾರಿ ನಿರೀಕ್ಷಕರಾಗಿ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡಿದ್ದೇನೆ. ದಿಃ 05-04-2022 ರಂದು ಚಾಸಾ-1 ರವರಿಂದ ಕಡತವನ್ನು ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ-6 ರವರ ಮುಖಾಂತರ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ಗಾಂಜಾವನ್ನು ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ 11-04-2022 ರಂದು ಗಾಂಜಾ ಸಿಕ್ಕ ಜಮೀನಿನ ಮಾಲೀಕತ್ವದ ಬಗ್ಗೆ ಉತಾರ ನೀಡಲು ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ.

2. ದಿಃ 24-06-2022 ರಂದು ರಾಸಾಯನಿಕ ಪರೀಕ್ಷೆ ವರದಿಯನ್ನು ಪಡೆದುಕೊಂಡಿರುತ್ತೇನೆ. ಆ ವರದಿಯನ್ನು ಈಗಾಗಲೇ ನಿಪಿ-6 ಅಂತ ಗುರುತಿಸಲಾಗಿದೆ. ಜಮೀನಿನ ಮಾಲೀಕತ್ವದ ಬಗ್ಗೆ ಉತಾರವನ್ನು ಪಡೆದುಕೊಂಡಿರುತ್ತೇನೆ. ಉತಾರವನ್ನು ನಿಪಿ-27 ಅಂತ ಗುರುತಿಸಲಾಯಿತು. ನಿಪಿ-27 ರೊಂದಿಗೆ ಇದ್ದ ಕವಚ ಪತ್ರವನ್ನು ನಿಪಿ-28 ಅಂತ ಗುರುತಿಸಲಾಯಿತು. ಮನವಿ ಪತ್ರವನ್ನು ನಿಪಿ-29 ಅಂತ, ಸಾಕ್ಷಿ ಸಹಿಯನ್ನು ನಿಪಿ-29(ಎ) ಅಂತ ಗುರುತಿಸಲಾಯಿತು.

3. ನಂತರ ಚಾಸಾ-2, 3, 6, ರಂಗಪ್ಪರವರ ಹಾಗೂ ವಿರುಪಾಕ್ಷರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 15-06-2022 ರಂದು ಆರೋಪಿಯ ಹೇಳಿಕೆ ಪಡೆದುಕೊಂಡಿರುತ್ತೆನೆ. ನಂತರ ತನಿಖೆ ಪೂರೈಸಿ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ ., ವಕೀಲರಿಂದ ಆರೋಪಿತರ ಪರವಾಗಿ**:

4. NDPS ಕಾಯ್ದೆಯಡಿ ನನಗೆ ತರಬೇತಿ ಇರುತ್ತದೆ. ನಮ್ಮ ಕಛೇರಿಯು ಹೊನ್ನಾಳಿಯ ಸರ್ಕಾರಿ ಬಸ್ ನಿಲ್ದಾಣದ ಎದುರುಗಡೆ ಇದೆ. ಅಲ್ಲಿಂದ ಜೆ.ಎಂ.ಎಫ್.ಸಿ ನ್ಯಾಯಾಲಯ ಅರ್ಧ ಕಿ.ಮೀ. ಇರಬಹುದು. ಶೋಧನಾ ವಾರೆಂಟ್ ನ್ನು ನ್ಯಾಯಾಲಯದಿಂದ ಪಡೆದುಕೊಂಡಿದ್ದಾರಾ ಇಲ್ಲ ಅಂತ ನನಗೆ ಗೊತ್ತಿಲ್ಲ. ಪತ್ರಾಂಕಿತ ಅಧಿಕಾರಿಯಿಂದ ಅಧಿಕಾರಿ ಪತ್ರವನ್ನು ಪಡೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಪ್ರಕರಣವು ಕುದುರೆಕೊಂಡ ಗ್ರಾಮದ್ದು ಇರುತ್ತದೆ. ಪ್ರಕರಣವನ್ನು 30-03-2022 ರಂದು ದಾಖಲಿಸಲಾಯಿತು. ಆ ಸಮಯದಲ್ಲಿ ನಾನು ಕಛೇರಿಯಲ್ಲಿ ಇದ್ದೆ. ಆ ನಾನು ಕಛೇರಿಯಲ್ಲಿ 11.00 ಗಂಟೆಯವರೆಗೆ ಇದ್ದೆ. ಈಗ ನನಗೆ ತೋರಿಸಿದ ನಿಡಿ-1 ರಲ್ಲಿ ನನ್ನ ಸಹಿ ಇರುತ್ತದೆ. ಆ ಮಹಜರ ಕಾಲಕ್ಕೆ ನಾನು ಕಛೇರಿಯಲ್ಲಿ ಇರಲಿಲ್ಲ ಅಂದರೆ ನಿಜ. ಯಾವುದೇ ಒಂದು ಮಾಹಿತಿ ಬಂದಲ್ಲಿ ಕಛೇರಿಯ ಒಂದು ಪುಸ್ತಕದಲ್ಲಿ ನಮೂದು ಮಾಡುತ್ತೇವೆ ಅಂದರೆ ನಿಜ. ಆ ಪುಸ್ತಕದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದ ಕಛೇರಿಯ ಸಂಖ್ಯೆ ನಿಪಿ-1 ಮತ್ತು 2 ರಲ್ಲಿ ನಮೂದು

ಮಾಡಿಲ್ಲ. ಇನ್ವೆಂಟರಿಯನ್ನು ದಿಃ 01-04-2022 ರಂದು ಮಾಡಲಾಯಿತು. ಇನ್ವೆಂಟರಿಗಿಂತ ಮುಂಚೆ ಮಾದರಿಗಾಗಿ ವಶಪಡಿಸಿಕೊಂಡ article ನಮ್ಮ ಹತ್ತಿರ ಇತ್ತು. ಆ ಮೂರು ದಿನ ಗಾಂಜಾವನ್ನು ನಮ್ಮ ವಶದಲ್ಲಿ ಇಟ್ಟುಕೊಳ್ಳಲು ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿಲ್ಲ. ಸಾಕ್ಷಿದಾರರು ಹೇಳುತ್ತಾರೆ ನ್ಯಾಯಾಧೀಶರು ಅವರು ಹೇಳಿದ ಸಮಯದಲ್ಲಿ ಇನ್ವೆಂಟರಿ ಮಾಡುವುದಾಗಿ ಹೇಳಿದ್ದರಿಂದ ಅದು ನಮ್ಮ ವಶದಲ್ಲಿತ್ತು. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಇನ್ವೆಂಟರಿ ಮಾಡುವ ಪೂರ್ವದಲ್ಲಿ ನಮ್ಮ ಇಲಾಖೆಯವರು ನ್ಯಾಯಾಧೀಶರನ್ನು ಮಾಡಿಲ್ಲ ಅಂದರೆ ನನಗೆ ಗೊತ್ತಿಲ್ಲ. ಸೂರ್ಯೋದಯ ಆದ ನಂತರ ಸೂರ್ಯಾಸ್ತ ಆಗೋದರಲ್ಲಿ ಪತ್ರಾಂಕಿತ ಅಧಿಕಾರಿಗಳ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ ಅಂದರೆ ಸರಿ. ಸಾಕ್ಷಿದಾರರು ಹೇಳುತ್ತಾರೆ ಅದು Detective Officer ಗೆ ಸಂಬಂಧಪಟ್ಟಿದ್ದು ಇರುತ್ತದೆ. ಚಾಸಾ-2, 3 ಮತ್ತು ರಂಗಪ್ಪರವರು ಪತ್ರಾಂಕಿತ ಅಧಿಕಾರಿಗಳು ಇರುವುದಿಲ್ಲ.

5. ನಿಪಿ-8 ರ ಮಹಜರನಲ್ಲಿ ಗಾಂಜಾದ ಬೇರು, ಕಾಂಡ, ಎಲೆ, ಬೀಜ, ಪರಾಗ ಬೇರ್ಪಡಿಸಿಲ್ಲ. ಮಹಜರನಲ್ಲಿ ಜಮೀನಿನ ಚಕ್ಕುಬಂದಿ ಮಾತ್ರ ಇದೆ ಅಂದರೆ ಸರಿ. ಗುನ್ನಾ ಸ್ಥಳದ ಚಕ್ಕುಬಂದಿ ಮಹಜರನಲ್ಲಿ ನಮೂದು ಆಗಿಲ್ಲ ಅಂದರೆ ಸರಿಯಲ್ಲ. ಈ ವಿಚಾರದ ಬಗ್ಗೆ ನಾನು ಚಾಸಾ-1 ರವರಿಂದ ಯಾವುದೇ ಮಾಹಿತಿ ಪಡೆದುಕೊಂಡಿಲ್ಲ ಅಂದರೆ ಸುಳ್ಳು. ರಾಸಾಯನಿಕ ಪರೀಕ್ಷೆಗಾಗಿ ಎಷ್ಟು ತೂಕದ ಮಾದರಿಯನ್ನು ತೆಗೆದುಕೊಳ್ಳಲಾಯಿತು ಅಂತ ಎಲ್ಲೂ ನಮೂದಾಗಿಲ್ಲ ಅಂದರೆ ಅದು Detective Office ಗೆ ಗೊತ್ತು ಮತ್ತು ಅದು 34 ಗ್ರಾಂ. ತೆಗೆದಿದ್ದಾರೆ ಅಂತ ನನಗೆ ಮಾಹಿತಿ ಇದೆ. ನ್ಯಾಯಾಲಯದ ಅನುಮತಿಯನ್ನು Dispose ಗೆ ಸಂಬಂಧಪಟ್ಟಿದ್ದು ಇರುತ್ತದೆ ಅಂದರೆ ಉಳಿದ ಗಾಂಜಾವನ್ನು disposal ಮಾಡಲು ಅನುಮತಿ ಕೇಳಿರುತ್ತದೆ. ಸಾಮಾನ್ಯವಾಗಿ ರಾಸಾಯನಿಕ ಪರೀಕ್ಷಗೆ ಮಾದರಿಯನ್ನು ಕಳುಹಿಸಿದ ನಂತರ 30 ದಿನದೊಳಗಡೆ Disposal ಗೆ ಕೇಳಬೇಕಾಗುತ್ತದೆ ಅಂದರೆ ನಿಜ. ಇನ್ವೆಂಟರಿ ಅರ್ಜಿಯಲ್ಲಿ disposal ಗೆ ಕೇಳಿದ್ದೇವೆ ಅಂದರೆ ನಿಜ.

6. ಚಿತ್ರೀಕರಣವನ್ನು ವಿರುಪಾಕ್ಷರವರು ಮಾಡಿದರು ಮತ್ತು ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅವರನ್ನು ಸಾಕ್ಷಿದಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ. ನಾನು ಹೇಳಿದಂತೆ ತನಿಖೆ ಮಾಡಿಲ್ಲ, ವಿರುಪಾಕ್ಷರವರು ಚಿತ್ರೀಕರಣ ಮಾಡಿಲ್ಲ ಅಂದರೆ ಸರಿಯಲ್ಲ. ರಾಸಾಯನಿಕ ಪರೀಕ್ಷೆಗೆ ನಾನು 05 ದಿನಗಳ ನಂತರ ಕಳುಹಿಸಿಕೊಟ್ಟಿರುತ್ತೇನೆ. ಸಾಮನ್ಯಾವಾಗಿ ಮಾದರಿಗಾಗಿ ಕಳುಹಿಸಿದಾಗ ಅದನ್ನು suspected ಆಗಿ ಕಳುಹಿಸುತ್ತೇವೆ ಅಂದರೆ ಸರಿ. ನಿಪಿ-26 ರಲ್ಲಿ suspected material ಅಂತ ಇಲ್ಲ. ಅದರಲ್ಲಿ ನೇರವಾಗಿ ಗಾಂಜಾ ಅಂತನೇ ನಮೂದಾಗಿದೆ ಅಂದರೆ ನಿಜ. ರಾಸಾಯನಿಕ ಪರೀಕ್ಷೆಗಾಗಿ ನಾವು ಕಳುಹಿಸಿದ ಅರ್ಜಿಯಲ್ಲಿ ಗಾಂಜಾ ಅಂತನೇ ನಮೂದಾಗಿದೆ ಅಂದರೆ ನಿಜ. ಚಾಸಾ-1 ರವರು ಹೇಳಿದ ಆಧಾರದ ಮೇಲೆ ಅದು ಗಾಂಜಾ ಅಂತ ಹೇಳಿದ್ದೇವೆ ಅಂದರೆ ನಿಜ. ಮೇಲೆ ಹೇಳಿದಂತೆ ನಾನು ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ತನಿಖೆ ನಡೆಸುವಾಗ ಈ ಪ್ರಕರಣದ ಆರೋಪಿಯು ಸಾಮಾನ್ಯ ರೈತ ಅಂತ ಗೊತ್ತಾಯಿತು ಅಂದರೆ ಸುಳ್ಳು. ಜಮೀನಿನ ವಿಸ್ತೀರ್ಣ 1 ಎಕರೆ ಇರುತ್ತದೆ.

7. ಆರೋಪಿಯು ತಮ್ಮ ಹೇಳಿಕೆಯಲ್ಲಿ ಗಾಂಜಾ ಗಿಡ ಅಂತನೇ ಗೊತ್ತಿಲ್ಲ ಅಂತ ಹೇಳಿದ್ದಾರೆ ಅಂದರೆ ನಿಜ. ಅದೇ ರೀತಿ ಗಾಂಜಾ ಹೇಗೆ ಇರುತ್ತದೆ ಅಂತ ನನಗೆ ಗೊತ್ತಿಲ್ಲ ಅಂತ ಹೇಳಿದರು ಅಂದರೆ ಸುಳ್ಳು. ರಾಸಾಯನಿಕ ಪರೀಕ್ಷೆಗಾಗಿ 34 ಗ್ರಾಂ. ನ್ನು ಮಾದರಿಯಾಗಿ ಇಟ್ಟಿದ್ದರು, ಅನುಮತಿ ಪಡೆದುಕೊಂಡು ಉಳಿದ ಗಾಂಜಾವನ್ನು disposal committee ಗೆ ಕಳುಹಿಸಿದರು. ಈ ಮಾತನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತನಿಖೆಯಲ್ಲಿ ಆರೋಪಿಯು ಯಾವುದೇ ತಪ್ಪು ಮಾಡಿಲ್ಲ ಅಂತ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಪ್ರಕರಣಕ್ಕೂ, ಈ ಮುದ್ದೆ ಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

8. ನಮ್ಮ ವಾರ್ಷಿಕದ ಅವಧಿ ಏಪ್ರಿಲ್ ನಿಂದ ಮುಂದಿನ ವರ್ಷದ ಮಾರ್ಚ ತಿಂಗಳವರೆಗೆ ಇರುತ್ತದೆ. ಅಂಕಿ ಸಂಖ್ಯೆ ಸಲುವಾಗಿ ಈ ಅರ್ಜಿಯನ್ನು ಸಲ್ಲಿಸಲಾಯಿತು ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.